ಆ ಮಕ್ಕಳು ಕೇಳಿದ್ದಕ್ಕೋಸ್ಕರ ಆರು ಶಸ್ತ್ರ ಚಿಕಿತ್ಸೆ ಮಾಡಲಾಗಿದೆ. ಆ ಬಾಲಕ ಬಹುಶಃ ಗುಣಮುಖನಾಗಬಹುದು. ನಾನು ಆ ಫೋಟೋವನ್ನು ತಮಗೆ ಕಳುಹಿಸಿಕೊಡುತ್ತೇನೆ.

3. ವಿಷಯ : ಸರ್ಕಾರೀ ಸಾಮ್ಯದ ಮಂಡ್ಯ ಮೈಶುಗರ್ ಕಾರ್ಖಾನೆಯ ಕಬ್ಬನ್ನು ಬೆಳೆದ ರೈತರಿಗೆ ಬೆಂಬಲ ಬೆಲೆ ಕುರಿತು.

ಶ್ರೀ ಎಂ. ಶ್ರೀನಿವಾಸ (ಮಂಡ್ಯ) : ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆಯಲ್ಲಿ 50 ಲಕ್ಷ ಟನ್ ಕಬ್ಬು ಬೆಳೆದು ನಿಂತಿದೆ. 5 ಸಕ್ಕರೆ ಕಾರ್ಖಾನೆಗಳು ಕಬ್ಬನ್ನು ಅರೆಯಬೇಕಾಗಿದೆ. ಕಾರ್ಖಾನೆಗಳು ಕಳೆದ ತಿಂಗಳಿನಲ್ಲಿಯೇ ಕಬ್ಬನ್ನು ಅರೆಯುವುದಕ್ಕೆ ಪ್ರಾರಂಭಿಸಬೇಕಾಗಿತ್ತು. ದರ ನಿಗದಿಯಾಗದೆ ಅದನ್ನು ಮುಂದೂಡಲಾಗಿದೆ. ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿಯವರು ಕಳೆದ ತಿಂಗಳು ಸಭೆ ಸೇರಿ 5 ಜುಲೈ ಒಳಗಡೆ ದರ ನಿಗದಿಪಡಿಸದಿದ್ದರೆ ಹೋರಾಟ ಹಾದಿಯನ್ನು ಹಿಡಿಯುವ ಎಚ್ಚರಿಕೆ ಕೊಟ್ಟಿದ್ದರು. ನಮ್ಮ ಮೈಶುಗರ್ ಕಾರ್ಖಾನೆ ಸರ್ಕಾರಿ ಸ್ವಾಮ್ಯದ ಕಾರ್ಖಾನೆಯಾಗಿದೆ. ಮಾನ್ಯ ಮುಖ್ಯಮಂತ್ರಿಯವರು ಮಧ್ಯೆ ಪ್ರವೇಶ ಮಾಡಿ ಎಲ್ಲಾ ವರ್ಷಗಳಲ್ಲೂ ದರ ನಿಗದಿಪಡಿಸುತ್ತಿದ್ದರು. ಆದರೆ, ಇದುವರೆಗೂ ಮಾನ್ಯ ಮುಖ್ಯಮಂತ್ರಿಯವರಾಗಲಿ, ಸಂಬಂಧಪಟ್ಟ ಮಂತ್ರಿಯವರಾಗಲಿ ಈ ಬಗ್ಗೆ ಯಾರೂ ಆಲೋಚನೆ ಮಾಡಲಿಲ್ಲ ಮತ್ತು ದರ ನಿಗದಿಪಡಿಸಲಿಲ್ಲ. ಇದಲ್ಲದೆ ಕಳೆದ ಬಾರಿ ನುರಿದ ಕಬ್ಬಿಗೆ ಮಂಡ್ಯ ಜಿಲ್ಲಾಧಿಕಾರಿಗಳ ಸಮಕ್ಷಮದಲ್ಲಿ ಒಂದು ಟನ್ ಕಬ್ಬಿಗೆ 1950 ರೂ. ದರ ನಿಗದಿಪಡಿಸಲಾಗಿತ್ತು. ಆದರೆ, 4 ಕಂಪನಿಗಳು, ಎಸ್.ಸಿ. ಮಲ್ಲಯ್ಯ ಕಂಪನಿ, ಚಾಮುಂಡೇಶ್ವರಿ ಕಂಪನಿ ಮತ್ತು ಐಸಿಎಲ್ ಕಂಪನಿಗಳು, ಎಲ್ಲಾ ಕಂಪನಿಗಳು 1950 ರೂ.ಗಳನ್ನು ಪಾವತಿ ಮಾಡಿವೆ.

ಆದರೆ, ಮಂಡ್ಯ ಸಕ್ಕರೆ ಕಾರ್ಖಾನೆ ಮೈಶುಗರ್ ಸಕ್ಕರೆ ಕಾರ್ಖಾನೆ ಸರ್ಕಾರದ ಕಾರ್ಖಾನೆ. 1,500 ರೂಪಾಯಿ ಮಾತ್ರ ಕೊಟ್ಟು ಇನ್ನೂ ಬಾಕಿ 450 ರೂಪಾಯಿಗಳನ್ನು ಪಾವತಿ ಮಾಡಿಲ್ಲ. ದಯಮಾಡಿ 450 ರೂಪಾಯಿಗಳ ಬಾಕಿ ಹಣ ಕೊಡಬೇಕು. 2010–11 ರ ಸಾಲಿಗೆ ಕಬ್ಬಿನ ದರ ನಿಗದಿ ಮಾಡಬೇಕೆಂದು ನಾವೆಲ್ಲರೂ ಈ ಸರ್ಕಾರವನ್ನು ಒತ್ತಾಯಿಸುತ್ತಿದ್ದೇವೆ.

ಶ್ರೀ ಶಿವರಾಜ್ ಎಸ್. ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು) : ಮಂಡ್ಯದ ಮೈಶುಗರ್ ಕಾರ್ಖಾನೆಯು 2009–10 ನೇ ಸಾಲಿನಲ್ಲಿ ಕಾರ್ಖಾನೆಗೆ ಸರಬರಾಜು ಮಾಡಿದ ಕಬ್ಬಿಗೆ ಪ್ರತಿ ಟನ್‌ಗೆ 1,500/– ಗಳಂತೆ ಪೂರ್ಣವಾಗಿ ಪಾವತಿಸಿರುತ್ತದೆ. ಈ ಮಧ್ಯೆ 2010ರ ಜನವರಿ ತಿಂಗಳಲ್ಲಿ ಸಕ್ಕರೆ ಬೆಲೆಯು ಏರಿಕೆಯಾಗಿದ್ದು, ಮಂಡ್ಯ ಜಿಲ್ಲೆಯ ಕಬ್ಬು ಬೆಳೆಗಾರರು ಜಿಲ್ಲೆಯ ಎಲ್ಲಾ ಕಾರ್ಖಾನೆಗಳು ಕಬ್ಬು ಬೆಲೆಯನ್ನು ಏರಿಸಬೇಕೆಂದು

ಒತ್ತಾಯ ಮಾಡಿದಾಗ, ಆಗಿನ ಮಂಡ್ಯದ ಪ್ರಭಾರಿ ಜಿಲ್ಲಾಧಿಕಾರಿಗಳು ಎಲ್ಲಾ ಕಾರ್ಖಾನೆಗಳ ಸಭೆ ಕರೆದಿದ್ದು, ಈ ಸಭೆಯಲ್ಲಿ ಜಿಲ್ಲೆಯ ಮೂರು ಖಾಸಗಿ ಕಾರ್ಖಾನೆಗಳಾದ 1. ಚಾಮುಂಡೇಶ್ವರಿ ಶುಗರ್ಸ್ ಲಿ., 2. ಎನ್.ಎಸ್.ಎಲ್. ಶುಗರ್, 3. ಕೋರಮಂಡಲ್ ಶುಗರ್ಸ್ ಪ್ರತಿನಿಧಿಗಳು ಮತ್ತು ಮೈಶುಗರ್ ಕಾರ್ಖಾನೆಯ ಪ್ರತಿನಿಧಿಗಳು ಸಹ ಹಾಜರಾಗಿರುತ್ತಾರೆ. ಸಭೆಯಲ್ಲಿ ಹಾಜರಿದ್ದ ರೈತ ಮುಖಂಡರು ಮತ್ತು ಜನಪ್ರತಿನಿಧಿಗಳೊಂದಿಗೆ ಚರ್ಚಿಸಿ 2009–10ನೇ ಸಾಲಿಗೆ ಸರಬರಾಜು ಮಾಡಿದ ಕಬ್ಬಿಗೆ ಪ್ರತಿ ಟನ್ನಿಗೆ 1950/– ರೂ.ಗಳನ್ನು ನೀಡಬೇಕೆಂದು ನಿರ್ಧರಿಸಲಾಗಿದ್ದು, ಆದರೆ ಮೈಸೂರು ಸಕ್ಕರೆ ಕಾರ್ಖಾನೆಯ ಪರವಾಗಿ ಹಾಜರಿದ್ದ ಪ್ರತಿನಿಧಿಗಳು ಕಾರ್ಖಾನೆಯು ಪ್ರಸ್ತುತ ಆರ್ಥಿಕ ಸಂಕಷ್ಟದಲ್ಲಿರುವುದರಿಂದ ಹಾಗೂ ರೋಗಗ್ರಸ್ಥ ಕಾರ್ಖಾನೆಯೆಂದು ಬಿ.ಐ.ಎಫ್.ಆರ್. ನಲ್ಲಿ ನೊಂದಣಿಯಾಗಿರುವ ವಿಷಯವನ್ನು ಸಭೆಯ ಗಮನಕ್ಕೆ ತಂದು ಜಿಲ್ಲಾಧಿಕರಿಯವರು ಪ್ರಸ್ತಾಪಿಸಿರುವ ಪ್ರತಿ ಟನ್ ಕಬ್ಬಿಗೆ 1950/– ರೂ.ಗಳನ್ನು ನೀಡಲು ಕಾರ್ಖಾನೆಗೆ ಸಾಧ್ಯವಿಲ್ಲವೆಂದು ಮನವಿ ಮಾಡಿರುತ್ತಾರೆ. 2009–10ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಮೈಸೂರು ಸಕ್ಕರೆ ಕಾರ್ಖಾನೆಗೆ ನ್ಯಾಯಯುತ ಹಾಗೂ ಲಾಭದಾಯಕ ಬೆಲೆ (FRP) ಪ್ರತಿ ಟನ್ ಕಬ್ಬಿಗೆ 1298.40 ರೂ.ಗಳೆಂದು ಘೋಷಿಸಿದ್ದು, ಕಾರ್ಖಾನೆಯು ಪ್ರತಿ ಟನ್ನಿಗೆ 1500/–ರಂತೆ ಪಾವತಿ ಮಾಡಿದ್ದು, ಕೇಂದ್ರ ಸರ್ಕಾರ ನಿಗಧಿಪಡಿಸಿರುವ FRP ಗಿಂತ ಹೆಚ್ಚಿರುತ್ತದೆ. 2009–10 ನೇ ಸಾಲಿನಲ್ಲಿ ಕಾರ್ಖಾನೆಯು 1,23,801/– ಮೆ.ಟನ್ ಕಬ್ಬನ್ನು ಮಾತ್ರ ಅರೆದಿದು. ಶೇ 7 ರಷ್ಟು ಸಕ್ಕರೆ ಇಳುವರಿ ಪಡೆದಿದ್ದು, ಪ್ರಸ್ತುತ ಸಕ್ಕರೆ ಬೆಲೆಯು ಕುಸಿತಯುತ್ತ ಬಂದಿದ್ದು, ಈ ಹಿನ್ನೆಲೆಯಲ್ಲಿ ಪ್ರತಿ ಟನ್ ಕಬ್ಬಿಗೆ 1500/– ಕ್ಕಿಂತ ಹೆಚ್ಚು ಬೆಲೆ ನೀಡಲು ಕಾರ್ಖಾನೆಗೆ ಸಾಧ್ಯವಿರುವುದಿಲ್ಲ.

ದಿನಾಂಕ : 2–7–2010ರಂದು ನಡೆದ ಕಾರ್ಖಾನೆ ಆಡಳಿತ ಮಂಡಳಿಯ ಸಭೆಯಲ್ಲಿ 2010–11ನೇ ಸಾಲಿಗೆ ಕಾರ್ಖಾನೆಗೆ ಸರಬರಾಜು ಮಾಡುವ ಕಬ್ಬಿಗೆ ಪ್ರತಿ ಟನ್ನಿಗೆ 1650/– ರೂ.ಗಳನ್ನು ನೀಡಲು ತೀರ್ಮಾನಿಸಲಾಯಿತು.

ಆದಷ್ಟು ಬೇಗನೆ ಅಂದರೆ ಎರಡೆ ದಿವಸಗಳೊಳಗೆ ಪ್ರಾರಂಭಿಸಲು ಮೈಶುಗರ್ ಕಂಪನಿಯ ಮಿಲ್‌ಗಳನ್ನು ನಾವು ಎಲ್ಲಾ ರೆಡಿ ಮಾಡಿಕೊಂಡಿದ್ದೇವೆ, ಹೀಗಾಗಿ ಎರಡು ದಿವಸದೊಳಗೆ ಕಬ್ಬು ಅರೆಯುವ ಕೆಲಸವನ್ನು ಪ್ರಾರಂಭಿಸುತ್ತೇವೆಂದು ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಎಂ. ಶ್ರೀನಿವಾಸ : ಇದರಲ್ಲಿ ಏನಾಗಿದೆ ಎಂದರೆ, ಆ ದಿನದ ಸಭೆಯಲ್ಲಿ ರೇಟ್ ಫಿಕ್ಸ್ ಮಾಡುವಾಗ ರೈತ ಪ್ರತಿನಿಧಿಗಳು ಮತ್ತು ಜನಪ್ರತಿನಿಧಿಗಳು ಇವರ ರೇಟ್‌ನ್ನು ಒಪ್ಪದೇ ಇದ್ದಾಗ, ಮುಖ್ಯಮಂತ್ರಿಗಳು ಮತ್ತು ಸಂಬಂಧಪಟ್ಟ ಮಂತ್ರಿಗಳ ಸಮಕ್ಷಮದಲ್ಲಿ

ಬೆಂಗಳೂರು ವಿಧಾನ ಸಭೆಯಲ್ಲಿ ತೀರ್ಮಾನಿಸುತ್ತೇವೆಂದು ಅಲ್ಲಿನ ಅಧ್ಯಕ್ಷರುಗಳಿಗೆ ಮಾತು ಕೊಟ್ಟಿದ್ದಾರೆ. ಇದುವರೆಗಿನ ಸಂಪ್ರದಾಯದಂತೆ, ಬೆಂಗಳೂರಿನ ವಿಧಾನಸೌಧದಲ್ಲಿ ಎಲ್ಲಾ ಜನ ಪ್ರತಿನಿಧಿಗಳನ್ನು ಮತ್ತು ರೈತ ಮುಖಂಡರುಗಳನ್ನು ಸಭೆಗೆ ಕರೆದು ಅಲ್ಲಿ ರೇಟ್ ಫಿಕ್ಸ್ ಮಾಡಲಾಗುತ್ತಿತ್ತು. ಈ ಸಾರಿಯೂ ಸಹ ದಯಮಾಡಿ ಆದಷ್ಟುಬೇಗ ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಂಬಂಧಪಟ್ಟ ಸಕ್ಕರೆ ಮಂತ್ರಿಗಳು ಸಭೆ ಸೇರಿ ಆ ಸಭೆಗೆ ರೈತರ ಹಿತರಕ್ಷಣಾ ಸಮಿತಿಯವರನ್ನು, ರೈತ ಸಂಘದವರನ್ನು ಎಲ್ಲಾ ಜನಪ್ರತಿ ನಿಧಿಗಳನ್ನು ಕರೆದು ದರವನ್ನು ನಿಗದಿ ಮಾಡಬೇಕೆಂದು ಈ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಶಿವರಾಜ್ ಎಸ್. ತಂಗಡಿಗಿ : ಮಾನ್ಯ ಅಧ್ಯಕ್ಷರೆ, ಈ ಹಿಂದೆ ನಾನು ಮತ್ತು ಸನ್ಮಾನ್ಯ ಮುಖ್ಯಮಂತ್ರಿಗಳು ಮೈಶುಗರ್ ಕಂಪನಿಗೆ ಹೋಗಿ ಅಲ್ಲಿ ಕಾರ್ಯಕ್ರಮವಿರುವಾಗಲೇ 1,500 ರೂಪಾಯಿಗಳೆಂದು ನಿಗದಿಪಡಿಸಿದೆವು. ಆದರೆ, ಈ ಸಾರಿಯೂ ನಾವು ಆ ಸಭೆಯನ್ನು ಕರೆಯಬೇಕಾಗಿತ್ತು. ಮಂಡಳಿಯೊಳಗೆ ಕೆಲವೊಂದು ನಿರ್ಧಾರವಾದ ಮೇಲೆ ಸಭೆ ಕರೆಯಬೇಕೆಂದು ನಿರ್ಧಾರ ಮಾಡಿದೆವು, 2ನೇ ತಾರೀಖಿನ ಮಂಡಳಿಯ ಸಭೆಯೊಳಗೆ ಈಗಾಗಲೇ 1,650/– ಕೊಡಬೇಕೆಂದು ನಿರ್ಧಾರವಾಗಿದೆ. ಈಗ ತಾವು ಅದನ್ನು ಕೇಳಿದ್ದೀರಿ. ಹಿಂದೆ ರೈತ ಹಿತ ರಕ್ಷಣೆ ಸಮಿತಿಯವರು ಪ್ರತಿಭಟನೆ ಮಾಡುವ ಅವಶ್ಯಕತೆಯಿಲ್ಲ. ಏಕೆಂದರೆ, ಅದು ರೈತರ ಕಾರ್ಖಾನೆ ಸರ್ಕಾರದ ಸ್ವಾಮ್ಯದಲ್ಲಿರುವುದರಿಂದ ಆ ಕಾರ್ಖಾನೆಯನ್ನು ಉಳಿಸುವ ಕೆಲಸ ನಾವೆಲ್ಲರೂ ಮಾಡಬೇಕಾಗಿದೆ. ಈ ಹಿಂದೆ ಸುಮಾರು ಹತ್ತು ವರ್ಷಗಳಲ್ಲಿ ಎಲ್ಲಾ ಮುಖ್ಯಮಂತ್ರಿಗಳು ಸೇರಿದಂತೆ ಕೇವಲ 14 ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದರು. ಆದರೆ, ಸನ್ಮಾನ್ಯ ಮುಖ್ಯಮಂತ್ರಿಗಳಾದ ಮಾನ್ಯ ಯಡಿಯೂರಪ್ಪನವರು ಮಂಡ್ಯ ಶುಗರ್ ಕಾರ್ಖಾನೆಯನ್ನು ಉಳಿಸುವ ಏಕೈಕ ದೃಷ್ಟಿಯಿಂದ ಈಗಾಗಲೇ 67 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಮುಂದಿನ ದಿನಗಳಲ್ಲಿ ವಿದ್ಯುತ್ ಘಟಕ ಇರಬಹುದು, ಮಧ್ಯಸಾರ ಘಟಕ ಇರಬಹುದು, ಅವೆಲ್ಲವನ್ನೂ ಸಹಿತ ಕಾರ್ಖಾನೆಯನ್ನು ರೆಡಿ ಮಾಡಿಸಬೇಕಾಗಿದೆ. ಈ ಕಂಪನಿ ಬಿ.ಐ.ಎಫ್.ಆರ್. ನಿಂದ ಹೊರಗಡೆ ಬರಬೇಕಾಗಿದೆ. ಅದು ರೈತರ ಮತ್ತು ರೈತರ ಪರವಾಗಿರುವ ಹಾಗೂ ಸರ್ಕಾರದ ಸ್ವಾಮ್ಯದಲ್ಲಿರುವ ಕಾರ್ಖಾನೆ. ನಮ್ಮ ಸರ್ಕಾರ ರೈತರ ಬಗ್ಗೆ ಚಿಂತನೆ ಮಾಡುವುದರಿಂದಲೇ ಎರಡು ವರ್ಷದೊಳಗೆ ಸುಮಾರು 67 ಕೋಟಿ ರೂಪಾಯಿಗಳನ್ನು ಕೊಟ್ಟು ಆ ಕಾರ್ಖಾನೆಯನ್ನು ಅಭಿವೃದ್ಧಿ ಮಾಡುವ ಕೆಲಸ ಮಾಡುತ್ತಿದ್ದೇವೆ. ನಮಗಿನ್ನು ನಮ್ಮ ಜನಪ್ರತಿನಿಧಿಗಳು ಇದಕ್ಕೆ ಸಹಕರಿಸಬೇಕು, ನಾವು ಎರಡೇ ದಿವಸದೊಳಗೆ ಮೈಶುಗರ್ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭಿಸುತ್ತೇವೆ. ಇದರ ಜೊತೆಗೆ 1,650/– ರೂಪಾಯಿಗಳ ಅಡ್ವಾನ್ಸ್ ಕೊಡುವಂಥ ಕೆಲಸ ಮಾಡುತ್ತೇವೆ.

ಶ್ರೀ ಎಂ. ಶ್ರೀನಿವಾಸ : ಹಿಂದಿನ ಸಮ್ಮಿಶ್ರ ಸರ್ಕಾರದಲ್ಲಿ 76 ಕೋಟಿ ರೂಪಾಯಿ

ಬಿಡುಗಡೆಯಾಗಿತ್ತು. ಜೊತೆಗೆ ಆ ಸಕ್ಕರೆ ಕಾರ್ಖಾನೆಯನ್ನು .....

ಅಧ್ಯಕ್ಷರು : ಇದೇನಿದು ನೀವು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿ ಈ ರೀತಿ ಕೇಳುತ್ತಾ ಹೋದರೆ ಹೇಗೆ ಮುಗಿಸುವುದು ? ಬೇರೆ ರೂಪದಲ್ಲಿ ತನ್ನಿ.

ಶ್ರೀ ಎಂ. ಶ್ರೀನಿವಾಸ : ಇದು ಇಡೀ ಜಿಲ್ಲೆಯ ಹಾಗೂ ರಾಜ್ಯದ ಸಮಸ್ಯೆಯಾಗಿದೆ.

ಅಧ್ಯಕ್ಷರು : ಸರಿ, ಹೀಗಿರುವಾಗ ನೀವು ಏಕೆ ಶೂನ್ಯವೇಳೆಯಲ್ಲಿ ಕೊಟ್ಟಿರಿ. ಬೇರೆ ರೂಪದಲ್ಲಿ ತರಬೇಕಾಗಿತ್ತು. ನೀವು ಶೂನ್ಯವೇಳೆಯಲ್ಲಿ ಕೇಳಿ ಎಲ್ಲವನ್ನೂ ಕೇಳಿಕೊಂಡು ಕುಳಿತರೆ ಹೇಗೆ ?

ಶ್ರೀ ಎಂ. ಶ್ರೀನಿವಾಸ : ನನ್ನ ಮನವಿ ಇಷ್ಟೆ. ಜನಪ್ರತಿನಿಧಿಗಳನ್ನು ಕರೆದು ಮತ್ತೊಮ್ಮೆ ಈ ಬಗ್ಗೆ ಮಾತನಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಆಯಿತು, ಅವರು ಒಪ್ಪಿದ್ದಾರೆ ಬಿಡಿ. ಮಾನ್ಯ ವಿರೋಧ ಪಕ್ಷದ ನಾಯಕರು.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ವಿರೋಧ ಪಕ್ಷದ ನಾಯಕರು ಮೂರು ದಿವಸಗಳಿಂದ ಮಾತನಾಡುತ್ತಿದ್ದಾರೆ, ನಮ್ಮದೇನೂ ಅಭ್ಯಂತರವಿಲ್ಲ. ಇವತ್ತು ಅವರು ಇನ್ನೂ ಒಂದು ಗಂಟೆ ಮಾತನಾಡುತ್ತಾರೆ, ನಂತರ ಮಾನ್ಯ ಜಯಚಂದ್ರರವರು ಮಾತನಾಡುತ್ತಾರೆ. ನಮ್ಮ ಪಕ್ಷದಲ್ಲಿ ಮಾನ್ಯ ಶಿವಲಿಂಗೇಗೌಡರವರು ಸೇರಿದಂತೆ 4–5 ಜನ ಮಾತನಾಡುತ್ತಾರೆ. ನಾಳೆ ಬೆಳಿಗ್ಗೆ ನಾನು ಮಾತನಾಡುತ್ತೇನೆ ಈ ವಿಚಾರ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು : ಇನ್ನು ಶುರುವಾಗಿಲ್ಲ. ಈಗ ಶೂನ್ಯವೇಳೆ.

ಶ್ರೀ ಸಿ.ಎಸ್. ಪುಟ್ಟರಾಜು : ಅಲ್ಲಿ ರೈತರ ಪರಿಸ್ಥಿತಿಯ ಬಗ್ಗೆ ಗಮನಿಸಬೇಕಾಗುತ್ತದೆ.

ಅಧ್ಯಕ್ಷರು : ಸಾಕು ಬಿಡಿ. ಶೂನ್ಯವೇಳೆಯಲ್ಲಿ ಈ ರೀತಿಯಾದರೆ ಹೇಗೆ ? ಮುಖ್ಯಮಂತ್ರಿಗಳು ಅಲ್ಲಿ ಸಭೆ ಕರೆಯುತ್ತೇನೆಂದು ಹೇಳಿದ್ದಾರೆ. ನೀವು ಪ್ರಸ್ತಾಪ ಮಾಡಿ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನ ಸೆಳೆಯುತ್ತಿದ್ದೇನೆ, ಸೆಳೆಯಲೋ ಬೇಡವೋ ?

ಶ್ರೀ ಎಸ್. ಸುರೇಶ್‌ಕುಮಾರ್ : ಇದು ಗಮನ ಸೆಳೆಯುವ ಸೂಚನೆ ಅಲ್ಲ. ಶೂನ್ಯವೇಳೆ.

ಅಧ್ಯಕ್ಷರು : ಗಮನ ಸೆಳೆಯುವ ಸೂಚನೆ ಅಲ್ಲ. ಶೂನ್ಯವೇಳೆ.

ಶ್ರೀ ಸಿದ್ಧರಾಮಯ್ಯ : ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ. ನೀವು ನಾಳೆ ಉತ್ತರ